**ಬಂಟ್ವಾಳ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ.**

**ಸಿ ಸಿ ನಂ. 220/2020**

ಪಿ ಡಬ್ಲ್ಯು - 5

ಸಿ **ಡಬ್ಲ್ಯೂ : 8**

**ಹೆಸರುಃ** ಸೌಮ್ಯ ಜೆ.

ಗಂಡನ **ಹೆಸರು :** ನವೀನ್ ಕುಮಾರ್

**ವಯಸ್ಸುಃ 36 ವರ್ಷ**

**ಉದ್ಯೋಗಃ** ಪೋಲೀಸ್ ಉಪನಿರೀಕ್ಷಕರು , ಮೆಸ್ಕಾಂ ಜಾಗೃತ ದಳ ಉಡುಪಿ

**ವಾಸಸ್ಥಳ :** ಉಡುಪಿ

---

**ದಿಃ 13.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿ. 04-**12-2018** ರಿಂದ **10-1-2022** ರ ವರೆಗೆ ಪುಂಜಾಲಕಟ್ಟೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಉಪನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 10.10.2019ರಂದು ಚಾಸಾ-9ರವರು ನೀಡಿದ ಜ್ಞಾಪನ ಪತ್ರ ಸ್ವೀಕರಿಸಿ ಪ್ರಕರಣದ ಕಡತ ಪಡೆದುಕೊಂಡು, ದಿ 16.10.2019ರಂದು ಆರೋಪಿ ಪತ್ತೆ ಬಗ್ಗೆ ಸಿಬ್ಬಂದಿಗಳನ್ನು ಕಳುಹಿಸಿರುತ್ತೇನೆ. ದಿ 01.11.2019ರಂದು ಸದರಿ ಠಾಣಾ ಸಿಬ್ಬಂದಿಗಳು ಆರೋಪಿ ಪತ್ತೆ ಮಾಡಿ ಬೆ 10.30 ಗಂಟೆಗೆ ನನ್ನ ಸಮಕ್ಷಮ ಹಾಜರುಮಾಡಿದ್ದು ಅವರನ್ನು ವಿಚಾರಿಸಿ, ಅವರ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯನ್ನು ದಸ್ತಗಿರಿ ಪ್ರಕ್ರಿಯೆ ಅನುಸರಿಸಿ ದಸ್ತಗಿರಿ ಮಾಡಿರುತ್ತೇನೆ.

ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ಮೊಬೈಲನ್ನು ಅಮಾನತುಪಡಿಸಿಕೊಳ್ಳಲು ಚಾಸಾ-2 ಮತ್ತು 3ರವರನ್ನು ಠಾಣೆಗೆ ಬರಮಾಡಿಕೊಂಡು ಪಂಚರ ಸಮಕ್ಷಮ ಬೆ 12.20 ರಿಂದ 13.20ರವರೆಗೆ ನಿಪಿ-3ರಂತೆ ಮಹಜರು ತಯಾರಿಸಿರುತ್ತೇನೆ. ಸಾಕ್ಷಿ ನಿಪಿ-3ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ನಿಪಿ-3ಬಿ ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಮೊಬೈಲ್ ನೋಡಿ

ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ. ನಂತರ ಸದರಿ ಮೊಬೈಲನ್ನು ಸ್ವತ್ತು ಪಟ್ಟಿಯಂತೆ ಮಹಜರಿನೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ದಿನಾಂಕ 07.11.2019ರಂದು ಚಾಸಾ-1ರವರ ಗಂಡನಿಗೆ ಮೊಬೈಲ್ ಹಾಜರು ಮಾಡುವಂತೆ ನೋಟೀಸು ನೀಡಿರುತ್ತೇನೆ.

ದಿನಾಂಕ 08.11.2019ರಂದು ಚಾಸಾ1ರವರ ಗಂಡ ಠಾಣೆಗೆ ಬಂದು ಮು ಮಾ 1 ಮೊಬೈಲನ್ನು ಹಾಜರುಮಾಡಿದ್ದು ಅದನ್ನು ಪಂಚರಾದ ಚಾಸಾ-3 ಮತ್ತು 4ರವರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ಸ್ವತ್ತು ಪಟ್ಟಿಯಂತೆ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ನಿಪಿ-2ನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಚಾಸಾ-1ರವರ ಗಂಡನಾದ ಸೋಮಶೇಖರ ಅವರ ಹೇಳಿಕೆಯನ್ನು ದಾಖಲುಮಾಡಿಕೊಂಡಿರುತ್ತೇನೆ.

ದಿನಾಂಕ 11.11.2019ರಂದು ಮು ಮಾ 1 ಮತ್ತು 2ನ್ನು ತಜ್ಞರ ಅಭಿಪ್ರಾಯಕ್ಕಾಗಿ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಅವರ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎಂ.ವಿ. ವಕೀಲರಿಂದಃ

ಘಟನೆಯಾಗಿ ಎಷ್ಟು ಸಮಯದ ನಂತರ ದೂರು ಕೊಟ್ಟಿರುವುದು ಎಂದರೆ ಸಾಕ್ಷಿ ಸುಮಾರು ಒಂದು ತಿಂಗಳ ನಂತರ ಎಂದು ನುಡಿಯುತ್ತಾರೆ. ಸದರಿ ವಿಳಂಬ ಯಾವ ಕಾರಣಕ್ಕೆ ಎಂದು ತನಿಖೆ ಮಾಡಿದ್ದೀನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಏನು ಕಾರಣ ಎಂದು ತಿಳಿಸಿದ್ದಾರೆ ಎಂದರೆ ಸಾಕ್ಷಿ ಸಂಬಂಧಿಕರಿಗೆ ಹಾಗೂ ನೆರೆಹೊರೆಯವರಿಗೆ ಗೊತ್ತಾದರೆ ಮುಜುಗರ ಆಗುವ ಕಾರಣ ಎಂದು ನುಡಿಯುತ್ತಾರೆ.

ನಾನು ಚಾಸಾ-1ರವರನ್ನು ನನ್ನ ತನಿಖೆಯಲ್ಲಿ ವಿಚಾರಣೆ ಮಾಡಿದ್ದೀನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಯಾವ ಆಧಾರದಲ್ಲಿ ಸಂಬಂಧಿಕರಿಗೆ ಗೊತ್ತಾದರೆ

ಮುಜುಗರ ಆಗುತ್ತದೆ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ದಾಖಲೆಗಳ ಆಧಾರದಲ್ಲಿ ಎಂದು ನುಡಿಯುತ್ತಾರೆ. ಚಾಸಾ-1ರವರು ಘಟನೆಯಾದ ಒಂದು ದಿನವೇ ದೂರು ಕೊಟ್ಟು ಅದು ಎನ್.ಸಿ.ಆರ್. ಅಗಿ ನೊಂದಣಿ ಆಗಿದೆ ಎಂದು ತಿಳಿಸಿದ್ದಾರೆ ಎಂದರೆ ಸಾಕ್ಷಿ ತನ್ನ ಗಮನಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ. ಠಾಣೆಯಲ್ಲಿ ಯಾವ ಪ್ರಕರಣ ಎನ್ ಸಿ ಆರ್ ಆಗುತ್ತದೆ ಅಥವಾ ಆಗುವುದಿಲ್ಲ ಎಂದು ಠಾಣಾಧಿಕಾರಿಯಾದ ನಮ್ಮ ಗಮನಕ್ಕೆ ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಈ ಪ್ರಕರಣದ ಎಲ್ಲಾ ಆರೋಪಗಳು ಸಂಜ್ಞೇಯ ಪ್ರಕಾರಕ್ಕೆ ಸಂಬಧಪಟ್ಟವು ಎಂದರೆ ಸುಳ್ಳು. ನಾನು ಆರೋಪಿಗೆ ದಸ್ತಗಿರಿ ಮಾಡುವ ಮುಂಚಿತ ನೋಟೀಸು ನೀಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ನೋಟೀಸು ನೀಡಿಲ್ಲ ಎಂದರೆ ಸಾಕ್ಷಿ ಐ.ಟಿ.ಕಾಯ್ದೆ ಕಲಂ 67 ಇದ್ದ ಕಾರಣ ಎಂದು ನುಡಿಯುತ್ತಾರೆ. ನಾನು ಕಲಂ 41(ಎ) ಸಿ.ಆರ್.ಪಿ.ಸಿ. ಉಲ್ಲಂಘನೆ ಮಾಡಿರುತ್ತೇನೆ ಎಂದರೆ ಸುಳ್ಳು. ಆರೋಪಿ ನನ್ನ ಸಮಕ್ಷಮ ಯಾವುದೇ ಸ್ವಇಚ್ಚಾ ಹೇಳಿಕೆ ನೀಡಿಲ್ಲ ಎಂದರೆ ಸುಳ್ಳು. ಆರೋಪಿಯ ಹೇಳಿಕೆ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ಏನೂ ಇಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾಖಲೆಗಳಲ್ಲಿ ಆರೋಪಿ ಸ್ವಇಚ್ಚಾ ಹೇಳಿಕೆ ಇಲ್ಲದೇ ಇದ್ದರೂ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು.

ಮು.ಮಾ.1 ಅಮಾನತುಪಡಿಸಿಕೊಳ್ಳುವಾಗ ಸಿಮ್ ಇತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-2 ಮು.ಮಾ.1ನ್ನು ಹಸ್ತಾಂತರಿಸುವ ಸಂಬಂಧ ಸಿಮ್ ನೀಡಿಲ್ಲ ಎಂದು ತಿಳಿಸಿದ್ದಾರೆ ಎಂದರೆ ಸುಳ್ಳು. ಮು ಮಾ 1ನ್ನು ಅಮಾನತುಪಡಿಸಿಕೊಳ್ಳುವ ಸಮಯ ಅರಗಿನಿಂದ ಸೀಲ್ ಮಾಡಿ ಸಾಕ್ಷಿ ಸಹಿ ಪಡೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಒಂದು ಮೊಬೈಲಿಗೆ ಸೀಲ್ ಮಾಡಿದ್ದು ಮತ್ತೊಂದು ಮೊಬೈಲಿಗೆ ಮಾಡಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ.

ಮು.ಮಾ-2 ಆರೋಪಿಗೆ ಸಂಬಂಧಪಟ್ಟ ಮೊಬೈಲ್ ಅಲ್ಲ ಎಂದರೆ ಸುಳ್ಳು. ಮು ಮಾ-2ಕ್ಕೆ ಆರೋಪಿಯ ಸಹಿ ಪಡೆದಿದ್ದೀರಾ ಎಂದರೆಸ ಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮು.ಮಾ.-2 ಅಮಾನತುಪಡಿಸುವ ಸಮಯ ಆರೋಪಿ ಇದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮು.ಮಾ.-2 ರ ಚೀಟಿಗೆ ಆರೋಪಿಯ ಸಹಿ ಪಡೆಯಲು ತೊಂದರೆ ಇತ್ತಾ

ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮು.ಮಾ.-2 ಆರೋಪಿಗೆ ಸಂಬಂದಪಟ್ಟದ್ದು ಎಂದು ತೋರಿಸಲು ದಾಖಲೆ ಆರೋಪಿಯಿಂದ ವಶಪಡಿಸಿಕೊಂಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮು.ಮಾ.-2 ಆರೋಪಿಗೆ ಸಂಬಂದಪಟ್ಟಿಲ್ಲ ಹಾಗೂ ಪ್ರಕರಣಕ್ಕೆ ಪೂರಕವಾಗಿ ನಾನೇ ಅದನ್ನು ಸೃಷ್ಟಿ ಮಾಡಿರುವ ಕಾರಣ ಆರೋಪಿಯ ಸಹಿ ಪಡೆದಿಲ್ಲ ಎಂದರೆ ಸುಳ್ಳು. ನ್ಯಾಯಾಲಯದಲ್ಲಿರುವ ಹೇಳಿಕೆ ಚಾಸಾ-2ರವರಿಗೆ ಸಂಬಂಧಪಟ್ಟಿಲ್ಲ ಎಂದರೆ ಸುಳ್ಳು. ನಾನು ಯಾವುದೇ ತನಿಖೆ ಮಾಡದೇ ಯಾವುದೇ ದಾಖಲೆಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸುಳ್ಳು. ಪ್ರಕರಣಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು.

ಮರುವಿಚಾರಣೆ ಇಲ್ಲ .

**ನ ಉ ರೀ ಬ ನ್ಯಾ ಬ ಮಾಡಲಾಯಿತು.**

**ಓ ಹೇ ಕೇ ಸ ಇದೆ.**

ಪ್ರಧಾನ **ಹಿರಿಯ ಸಿವಿಲ್‌ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟ್ವಾಳ**